ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	389
ಸದಸ್ಯರ ಹೆಸರು	ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	06.03.2020

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆದೇಶ ಸಂಖ್ಯೆ: ಗ್ರಾಅಪ:111:ಆರ್‌ಆರ್‌ಸಿ:2019 ದಿ:06.11.2019ರ ಪ್ರಕಾರ ಕೆಲವೊಂದು ವಿಧಾನ ಸಭಾ ಕ್ಷೇತ್ರಗಳು ಹಾಗೂ ಪ್ರದೇಶಗಳು ಪ್ರವಾಹದಿಂದ ಹಾನಿಗೊಳಗಾಗದೆ ಇದ್ದರೂ ಅನುದಾನ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;	ಮಳೆ ಮತ್ತು ನೆರೆಯಿಂದ ಹಾನಿಗೊಳಗಾದ ತಾಲ್ಲೂಕುಗಳನ್ನು ಹೊರತುಪಡಿಸಿದ ಇತರೆ ಕೆಲವೊಂದು ತಾಲ್ಲೂಕುಗಳಿಂದ ಕಾಮಗಾರಿಗಳ ಪ್ರಸ್ತಾವನೆಗಳು ಸರ್ಕಾರಕ್ಕೆ ಸಲ್ಲಿಸಲಾಗಿವೆ. ಇವುಗಳನ್ನು ಪರಿಶೀಲಿಸಿ ಕಂದಾಯ ಇಲಾಖೆಯಿಂದ ಮಳೆ ಮತ್ತು ನೆರೆಯಿಂದ ಬಾಧಿತವಾಗಿವೆ ಎಂದು ಘೋಷಣೆ ಮಾಡಿಲ್ಲದ ತಾಲ್ಲೂಕುಗಳ ಒಟ್ಟು ರೂ. 147.47 ಕೋಟಿಗಳ ಮೊತ್ತದ ಕಾಮಗಾರಿಗಳ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.
ಆ.	ಸದರಿ ಆದೇಶದಲ್ಲಿ ವೈಯಕ್ತಿಕ ಹೆಸರುಗಳ ಮೇಲೆ ನೆರೆಪರಿಹಾರದ ಅನುದಾನ ಮಂಜೂರು ಮಾಡಲಾಗಿದೆಯೇ; ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ವೈಯಕ್ತಿಕ ಹೆಸರುಗಳ ಮೇಲೆ ನೆರೆಪರಿಹಾರದ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ. ಮಳೆ ಮತ್ತು ನೆರೆ ಪರಿಹಾರದ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ, ಕೆಆರ್‌ಐಡಿಎಲ್ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
ಇ	ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್ ಅಡಿಯಲ್ಲಿ ಪ್ರಾರಂಭವಾಗಿರುವ ಮಾನ್ವಿ ತಾಲ್ಲೂಕಿನ ಕುರ್ಡಿ ಕಲ್ಲುರು ಯೋಜನೆಗಳನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಮಾನ್ವಿ ತಾಲ್ಲೂಕಿನ ಕುರ್ಡಿ ಮತ್ತು ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಮುಖ ಘಟಕಗಳಾದ Intake well, Jackwell ಮತ್ತು impounding reservoir ಕಾಮಗಾರಿಗಳು ಪೂರ್ಣಗೊಂಡಿದ್ದು, WTP ಮತ್ತು Intermediate Sump ಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿರುತ್ತದೆ. ಎಲ್ಲಾ ಬಾಕಿ ಕಾಮಗಾರಿಗಳನ್ನು ಮೇ 2020 ಅಂತ್ಯದೊಳಗೆ ಪೂರ್ಣಗೊಳಿಸಿ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಮಾನ್ವಿ ತಾಲ್ಲೂಕಿನ ಕಲ್ಲೂರು ಮತ್ತು 1 ಇತರೆ

		ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಶೇಖರಣಾ ಜಲಾಶಯದ ಸ್ಥಳವು ಮಂಜೂರಾಗದೇ ಇದ್ದ ಕಾರಣ ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಗುತ್ತಿಗೆದಾರರು ಅನುಮೋದಿತ ಟೆಂಡರ್ ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪದೇ ಇರುವುದರಿಂದ, ಸದರಿ ಗುತ್ತಿಗೆದಾರರ ಟೆಂಡರ್‌ನ್ನು ನಿಯಮಾನುಸಾರ ರದ್ದುಗೊಳಿಸಲು ಕ್ರಮವಹಿಸಲಾಗುತ್ತಿದೆ. ಸ್ಥಳದ ಬದಲಾವಣೆಯಿಂದ ವಿನ್ಯಾಸಗಳಲ್ಲಿ ಬದಲಾವಣೆಯಾಗಿದ್ದು, ಪರಿಷ್ಕೃತ ವಿನ್ಯಾಸಗಳು ಹಾಗೂ ಅಂದಾಜು ಪಟ್ಟಿಗಳಿಗೆ ಟೆಂಡರ್ ಕರೆದು ಕಾಮಗಾರಿಯನ್ನು 2020-21ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
ಈ	ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಇರುವ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಮುಂಚಿತವಾಗಿಯೇ ಗ್ರಹಿಸಿ ಕಾಮಗಾರಿಗಳನ್ನು NRDWP, SDP, Taskforce ಹಾಗೂ ಇತ್ಯಾದಿ ಲೆಕ್ಕ ಶೀರ್ಷಿಕೆಗಳಡಿ ಕೈಗೊಂಡು ಕುಡಿಯುವ ನೀರನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು "ಜಲಧಾರೆ" ಯೋಜನೆಯನ್ನು ರೂಪಿಸಿದ್ದು, ರಾಯಚೂರು ಜಿಲ್ಲೆಯ ಪ್ರಾಥಮಿಕ ಯೋಜನಾ ವರದಿಯನ್ನು ತಯಾರಿಸಲಾಗಿದೆ.

ಕಡತ ಸಂಖ್ಯೆ: ಗ್ರಾಅಪ:01/32:ಆರ್‌ಆರ್‌ಸಿ:2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು